ಅನುಭವ ಕಥನ

# ರಂಗಭೂಮಿಯ ಪ್ರೇಮದಲ್ಲಿ...

**ನಾಟಕ ಪ್ರದರ್ಶನ ಕಲೆ ಮಾತ್ರವಲ್ಲ, 'ಬದುಕುವ ಕಲೆ'ಯೂ ಹೌದು. ರಂಗದ ನಂಟು ಅಂಟಿಸಿಕೊಂಡವರಿಗೆ ಅನುಭವ ಮಂಟಪದಂತೆ ಪರಿಣಮಿಸುವ ರಂಗಭೂಮಿ ಕಲಿಸುವ ಪಾಠಗಳು ಬದುಕನ್ನು ಸಹನೀಯಗೊಳಿಸುವಂತಹವು. 'ವಿಶ್ವ ರಂಗಭೂಮಿ ದಿನ' (ಮಾರ್ಚ್ 27) ಸಂದರ್ಭದಲ್ಲಿ ಪ್ರಕಟಗೊಂಡಿರುವ ಈ ಕಥನ, ನಗೆಲಹರಿಯನ್ನು ಸಹೃದಯರಿಗೆ ದಾಟಿಸುತ್ತಲೇ ವರ್ತಮಾನದ ದಂದುಗಗಳಿಗೆ ಉತ್ತರವಾಗಿ ರಂಗಭೂಮಿಯನ್ನು ಕಾಣಿಸುತ್ತಿದೆ.**

**ಹರಿಪ್ರಸಾದ್ ಬೇಸಾಯಿ**

ಕಲೆ: ರಾಮಕೃಷ್ಣ ಸಿದ್ರಪಾಲ



ಆವತ್ತು ಸಂಜೆಯೇ ಕಾರ್ಯಕ್ರಮ. ಆಹ್ವಾನಿತರಿಗೆಲ್ಲ ಇನ್ನೊಮ್ಮೆ ನೆನಪು ಕೊಟ್ಟಿದ್ದಾಯಿತು. ಬ್ಯಾನರ್ ಬರೆಸಿ ತಂದಿದ್ದಾಯಿತು. ಮೈಕು, ಕುರ್ಚಿ ಹಾಕುವವರಿಗೂ ಹೇಳಿದ್ದಾಯಿತು. ಪತ್ರಕರ್ತ ಮಿತ್ರರೂ ಬರುವುದಾಗಿ ತಿಳಿಸಿದ್ದರು. ಇನ್ನು ಬಂದವರಿಗೆ ಸಂಜೆಗೊಂದು ಸವಿರುಚಿ ಕೊಡುವ ಕೆಲಸದ ಬಾಕಿ ಇತ್ತು.

ಅದದೇ ಕಾಫಿ ಟೀ ಬಿಸ್ಕತ್ತು ಪರಂಪರೆ ಮುರಿದು ಪ್ರತಿಸಲ ಒಂದೊಂದು ಹೊಸ ಖಾದ್ಯ ಪರಿಚಯ ಮಾಡಿಕೊಂಡೇ ಬಂದಿದ್ದೆವು. ಈ ಸಲ ಮರಗೆಣಸು ಮತ್ತು ಸಿಹಿಗೆಣಸಿನ ಖಾದ್ಯ ಕೊಡುವ ತೀರ್ಮಾನ ಆಗಿತ್ತು. ನಮ್ಮ ಕಾರ್ಯಕ್ರಮಗಳಿಗೆ ತಿಂಡಿ ತಿನಿಸು ಒದಗಿಸುತ್ತಿದ್ದ ನಳ ಮಾರಾಜನಿಗೂ ಮಾತಾಡಿಯಾಗಿತ್ತು. 'ಓ, ನೀವು ಗೆಣಸು ತಂದುಕೊಟ್ಟರೆ ಸಾಕು ಮಾರ್‍ರೆ, ಚಂದ ಮಾಡಿಕೊಡುವ' ಎಂದು ಭರವಸೆ ನೀಡಿದ್ದ.

ಆದರೆ ಗೆಣಸು ಕಳಿಸಬೇಕಿದ್ದ ರೈತರ ಫೋನೇ ಸಿಗದಾಗಿದೆ. ಸಾಮಾನ್ಯವಾಗಿ ಅವರು ಮಾತು ತಪ್ಪದವರು. ಆದರೂ ಕೈಗೆ ಸಿಗಬೇಕಾದದ್ದು ಸಿಗದಾದಾಗ ಆತಂಕ, ಅನುಮಾನಗಳ ಹುತ್ತ. ಚಣಚಣಕೂ ಹುತ್ತ ಬೆಳೆಯತೊಡಗಿತು. ಇದೇ ಮೊದಲ ಸಲ ಹೀಗಾಗುತ್ತಿರುವುದು. ಆದರೂ ಮತ್ತೆ ಮತ್ತೆ ಫೋನ್ ಒತ್ತುವುದು, ಚಡಪಡಿಸುವುದು ನಿಲ್ಲುತ್ತಿಲ್ಲ. ಆಗಲೇ ಸಮಯ ಮೀರತೊಡಗಿದೆ. ಏನಾದರೂ ಏರುಪೇರು ಆದಾಗಲೇ ಸಮಯ ವೇಗವಾಗಿ ಚಲಿಸುತ್ತದೆ ಎಂಬುದು ಸೋಜಿಗವೋ, ಭ್ರಮೆಯೋ?

ಅಷ್ಟರಲ್ಲಿ ಕೆಂಪಣ್ಣನು ರಂಗಕ್ಕೆ ಧುಮುಕಿದನು. ಈತನು ವಿಶ್ವಾಮಿತ್ರ ವಂಶಜನೆಂದು ಹೆಸರುವಾಸಿ. ಕೋಪ ಮಾಡಿಕೊಳ್ಳುವವರನ್ನು ಹೀಗೆ ಕರೆಯುವುದು ರೂಢಿಯಲ್ಲಿದೆ. ಆದರೆ ನಾನು ಬಲ್ಲಂತೆ ಕೋಪವು ಆತನ ಒಂದು ದಿವ್ಯಚೇತನ, ಮಿಗಿಲಾಗಿ ಆತನಿಗೆ ಕೋಪ ಬರುವುದು ಸಕಾರಣವಾಗಿ. ಹೀಗಿರುವಾಗ ವಿಶ್ವಾಮಿತ್ರ ವಂಶಜನೆಂದು ಕರೆಯುವುದು ರೂಢಿಯಿಂದ ಬಂದಿರುವ ರೋಗ. ರೂಢಿಯು ಮನುಷ್ಯನ ಚೈತನ್ಯವನ್ನು ಹೀಗೆ ಅನೇಕ ಬಗೆಯಲ್ಲಿ ಕುಗ್ಗಿಸುವ ಶಕ್ತಿ ಹೊಂದಿದೆ. ರೂಢಿಯ ಬಗ್ಗೆ ಶಂಕೆಯನ್ನು ಇಟ್ಟುಕೊಳ್ಳುವುದು ಲೇಸು. ನಿಜರಂಗಭೂಮಿಯು ಆ ಶಂಕೆಯನ್ನು ಕಲಿಸುತ್ತಲೇ ಇರುತ್ತದೆ.

ಏಳು ಸಮುದ್ರ ಈಜಿದಂತೆ ಎಸ್ಸೆಸ್ಸೆಲ್ಸಿಯನ್ನು ಪಾಸು ಮಾಡಿದ್ದ ಕೆಂಪಣ್ಣನು ಪಂಚಭೂತಗಳ ಮಾಯ್ಕಾರ ಮೋಡಿಗೆ ಮರುಳಾಗಿ ರಂಗಭೂಮಿಯ ಸುಳಿಗೆ ಸಿಲುಕಿದವನು. ರಂಗಭೂಮಿಯ ಯಾವುದೇ ಕೆಲಸಗಳಲ್ಲಿ ಅತೀವ ಆಸಕ್ತಿ ಮತ್ತು ಅವಿರತ ಚಡಪಡಿಕೆ ಉಳ್ಳವನು. ಇಂತಹ ಕೆಂಪಣ್ಣನು ತನ್ನ ರಂಗತಂತ್ರ ಬಳಸಿ ರೈತರ ಸಂಪರ್ಕ ಪಡೆದನು. ಇನ್ನು ಕೆಲವು ನಿಮಿಷಗಳಲ್ಲೇ ಗೆಣಸು ಯಾವುದೋ ಬಸ್ ಮೂಲಕ ತಲುಪಲಿದೆ ಎಂಬ ವರ್ತಮಾನ ನೀಡಿದನು. ಸದ್ಯ ಮಾನ ಉಳಿಯಿತು ಎಂದು ನಾವಿಬ್ಬರೂ ಆ ಬಸ್ಸಿನ ಬಳಿ ಓಡಿ ಹೋಗಿ ಇಳಿಸಿಕೊಂಡೆವು. ಎರಡು ಬರೋಬ್ಬರಿ ಗೆಣಸಿನ ಮೂಟೆ ಅವು. ಒಂದು ಮರಗೆಣಸು, ಇನ್ನೊಂದು ಸಿಹಿಗೆಣಸು. ಆ ಮೂಟೆಗಳನ್ನು ಆಟೊದಲ್ಲಿ ಹೇರಿಕೊಂಡು ನಳಮಾರಾಜನ ಮನೆಯ ಮುಂದೆ ಇಳಿದೆವು.

ಆದರೆ ಅಲ್ಲಿ ನಡೆದಿದ್ದೇ ಬೇರೆ. ನಳನು ನಮ್ಮನ್ನು ನೋಡಿ 'ಇದೆಲ್ಲ ಎಂತ ಚೀಲ ನೀವು ತಂದದ್ದು' ಎಂದು ಕೇಳಿದನು. ಗೆಣಸು ಎಂದೊಡನೆ ಬ್ರೇಕಿಂಗ್ ನ್ಯೂಸ್ ವರದಿಗಾರನಂತೆ ಕಿರುಚತೊಡಗಿದನು. 'ನಾನೇನೋ ಸಣ್ಣಗೆ ತರುತ್ತೀರಿ ಎಂದು ತಿಳಿದಿದ್ದೆ. ಇದು ಮಾಡಿಕೊಡಲು ಎಷ್ಟು ಸಮಯ ಹಿಡಿಯುತ್ತೆ ಗೊತ್ತುಂಟಾ ನಿಮಗೆ. ಈಗ ತಗೊಂಡು ಹೋಗಿ' ಎಂದೇಬಿಟ್ಟನು.

ಕೂಡಲೇ ರಾಂಗಾದ ಕೆಂಪಣ್ಣನು 'ನಿಮಗ ನಿನ್ನನಾ ಹೇಳಿದ್ದೆವು, ನೀವೇ ಒಪ್ಪಿದ್ದವರು. ಈಗ ಮಾಡಿಕೊಡಿ, ಅಷ್ಟೀಯ ಮತ್ತ' ಎಂದು ಪಾಟೀ ಸವಾಲು ಜಾರಿಯಲ್ಲಿಟ್ಟನು. ನಳನು 'ಹೇಳಿರಬಹುದು. ನೀವು ಇಷ್ಟು ತರುತ್ತೀರಿ ಅಂತ